ರಾಷ್ಟ್ರಕೇಸರಿ ಸುಭಾಸಬಾಬುಗಳ ಐತಿಹಾಸಿಕ ಪರಿಚಯ

:o:

(ಪುಸ್ತಕ ಪುಮರ್ಶಾಲೋಚನೆ)

ಲೇ:—ತಲ್ಲೂರ ರಾಯನಗೌಡರು

ಒಪ್ಪುವ ಪ್ರಾಯದ ಅಂತಃಶ್ಚಕ್ಷುಗಳನ್ನು ಧೂಮಕೇತುವಿನಂತೆ ಕುಕ್ಕಿಸಿ; ರಾಜ್ಯ ರಾಷ್ಟ್ರಗಳ ವಿಚಾರಾಂದೋಲನಗಳ ತೆನೆ ಒಕ್ಕಿ; ದಿಗಂತದಾಚೆಯ-ನಾಡಪ್ಪೀರರ ಕಣ್ಣೆ ತಾಯ್ನಾಡಿನ ತವಕದಿಂದ ತಳಮಳ ಆತ್ಮ ಪ್ರತಿಬಿಂಬವು ಪ್ರತಿ ನೇತ್ರ ದೆಲ್ಲ ಮೂಡಿಸಿ; ವಿಚಾರ ಬಾಗ್ಗೆಯ ಹಳ್ಳವ ಹರಿಸಿ, ಸ್ವಾತಂತ್ರ್ಯ ಜ್ವಾಲೆಯ ಗಾಳಿಯ ಬೀಸಿ; ಬ್ರಿಟಿಷ ಸಾಮ್ರಾಟರ ಗೂಡಿಗೆ ಲೆಗ್ಗೆಯ ಹಚ್ಚಿ; ಅಲ್ಲಿಯ ಮುತ್ಸದ್ದಿಗಳಿಗೆ ದಿಗಿಲು ಹೊಗಿಸಿ, ದಾಸ್ಯ ವಿಮೋಚನೆ ಕುದಿಕುದ್ದು, ವೀರ ದುಂಧುಭಿ ಸಾರಿ; ಬಿಸಿ ನೆತ್ತರ ತರುಣರ ತಲೆ ಕಲಕಿಸಿ; ರೈತನ ಸೇವೆಯ ರಾಷ್ಟ್ರನ ಕಟ್ಟಲು; ಸ್ವಾತಂತ್ರ್ಯ ಸಮರದಿ ರಕ್ತವ ಸುರಿಸಲು; ಅದೇ ಆತ್ಮ ಗೀತೆಯಾಗಿಟ್ಟುಕೊಂಡ ನವನಾಯಕ ರಾಷ್ಟ್ರಪತಿ ಸುಭಾಸ ಬಾಬುಗಳ ಪರಿಚಯ ಕ್ಕಾಗಿ ಸಾಹಸ ಮಾಡಿದ ಸುಯೋಗದ ಸೇವೆಯು ಈ ದಿನ ಪಾಟೀಲ ಕಲ್ಲನಗೌಡರಿಂದ ಕನ್ನಡಿಗರಿಗೆ ಕೆಲವೊಂದು ಮಟ್ಟಿಗೆ ಆಗಿದೆಯೆಂದು ಹೇಳಬಹುದು. ದೇಶಸೇವಕ ಕಲ್ಲನಗೌಡರ ಲೆಕ್ಕಣಿಕೆಯಿಂದ ಹೊರಟ "ಶೂರ ಸುಭಾಸಚಂದ್ರ ಬೋಸ" ಚರಿತ್ರೆಯು ಇಂದಿನ ರಾಷ್ಟ್ರಪ್ರಚಾರ ಸಾಹಿತ್ಯಕ್ಕೂ, ಐತಿಹಾಸಿಕ ವಾಙ್ಮಯಕ್ಕೂ, ಸ್ವಾತಂತ್ರ್ಯ ಸಂಗ್ರಾಮಕ್ಕೂ ತಕ್ಕಮ್ಮ ಸೇವೆಯು ಆಗಿದೆ. ಇದು ಯಾಕೆಂದರೆ ಕನ್ನಡ-ಕಣಜದಲ್ಲಿಯೇ ಚರಿತ್ರೆಗಳು ಕಡಿಮೆ. ಅದರಲ್ಲಂತೂ ಐತಿಹಾಸಿಕಗಳಿಗಿಳದ ಹೊತ್ತಿಗೆಗಳೇ ಇಲ್ಲ ವಲ್ಲದೆ ಇಂಡಿನ ಸ್ವಾತಂತ್ರ್ಯ ಬೇಗೆಯಲ್ಲಿ ಹೊತ್ತಿದ್ದು ಉರಿಯುತ್ತಿರುವ ಕನ್ನಡ ಮತ್ತೊಬ್ಬರಿಗೆ ಒಪ್ಪಲಾರದು. ಯಾಕಂದರೆ ವಸ್ತಾದಿಯ ಕೈಲಾಘವನ್ನು ಅವನ ಕುಲುಮೆಯಲ್ಲಿಯೇ ಸುರಿತ ಪ್ರಸಭವನ ತಿಂಸ ಸ್ಪೆಲ ವಾನನಷ್ಟು ಹೊರಗಿದ್ದವನು ಹೇಳಲಾರ ಲೆನು. ಅಂತೇ ಈ ಹೇಳಿಕೆಗೆ ಬೆಲೆಯಿದೆ ಹಾಗೆಯೆ ಸುಚರಿತೆಯನ್ನು ಮಂದಿನ ಸಾ ಪ್ರೇಗಾಗಿ, ಇಂದಿನ ಸಾಧನೆಗಾಗಿ, ಸಹಾಯ ವಾಗಿದೆ. ಈ ಮಾತಿಗಾಗಿ ತೂಗುವವನಲ್ಲಿ ಯೂ (ವಿಮರ್ಶಕ) ತಾಳ ತಪ್ಪಿ ಭಾವ ನೋದ್ರೇಕಕ್ಕೆ ಇಳಿದುದಾವ ಸಂದೇಹಕ್ಕೆ ಮುಂದಿನ ಶಾಂತಿ ಕಾಲದಲ್ಲಿ ಕುಳಿತ ಇತಿ ಹಾಸಕಾರನು ಲೆಕ್ಕ ಹಾಕಬಹುದು. ಜದು ತಪ್ಪು. "ರಾಜಕೀಯ ಜೀವನಕ್ಕೆ ಬೇ ಕಾದ ಮಾತುಗಳನ್ನೇ ಅಂದ-ಚಂದ ಮಡಿ ಹೇಳುವದೇ ಮೇಲ್ಮರಗತಿಯ ಸಾಹಿತ್ಯ ಲಕ್ಷಣವೆಂದು ಸಾರುವ ಪಕ್ಷವೂ ಉಂಟಾ ಗಿದೆ." ಎಂದು ಸಾಹಿತ್ಯಕಾರನೂ ಮತ್ತು ಒಬ್ಬ ಚರಿತ್ರನಾಯಕನನ್ನು ಅದೇ ಬಣದ ನು ಚಿತ್ರಿಸುವದು ಪಕ್ಷಪಾತವಾಗಲೇ ಬೇ ಕೆಂದು ಇತಿಹಾಸಕಾರನೂ ಈ ಚರಿತ್ರಕ್ಕೂ ಈ ಚರಿತ್ರ ವಿಮರ್ಶೆಗೂ ಗೋಮು ಹಚ್ಚಿ ಲಿಕ್ಕೆ ಧಾವಿಸಬಹುದು. ಇದಕ್ಕುತ್ತರ ಹೀಗೆ. ನಮಗೀಗ ಸ್ವಾತಂತ್ರ್ಯ ಹಸಿವು ಹೊತ್ತಿ ದ್ದಿದೆ. ಅಂತೇ ಆ ಹಸಿವು ಹಿಂಗಿಸಿಕೊಳ್ಳ ಬೇಕಾಗಿದೆ ಅದಕ್ಕುಪಾಯ ಇದೇ ಸಾಹಿತ್ಯ ವುಳ್ಳೆಯವಾಗಿದೆ. ಯಾಕೆಂದರೆ ಇಂತಹ ಜನ ಜೀವನ ವಿಚಾರ ಭಾವನೆಗಳನ್ನು ಹೇಳುವ ಬದಲು ಇನ್ನಾವದು ಯುಗಕ್ಕೆ ಕಾಲಮಾ ನಕ್ಕೆ ತಕ್ಕವಾಗಿದೆ. ಅಂತೇ ಇದು ನಿಜ ವಾದ ಸಾಹಿತ್ಯ ಕ್ರಾಂತಿ ಯುಗವಲ್ಲಿ ನಾವೇ ನೂ ಜಾಗ್ರತಿಯೊಳಗಾಗಿ

ಒಮ್ಮೊಮ್ಮೆ ವಿವರವಾಗಿದ್ದ ಸಂಗತಿಗಳನ್ನು ಪೋಣಿಸುವಾಗ ಅವಕ್ಕೆ ಐತಿಹಾಸಕ ಕಣ್ಣು ನಾ ವಿಚಾರಕ್ಕೂ ಶಕ್ತಿಗಳ ಮಹತ್ವಕ್ಕೂ ಇಂಬುಗೊಟ್ಟಿಲ್ಲ. ಆದರೆ ಒಮ್ಮೆ ಓದಲು ಆರಂಭವಾದರಂತೂ ಕೊನೆಯವರೆಗೆ ರಾಷ್ಟ್ರ ವೀರನ ತಿಳಿಯಬೇಕೆನ್ನುವ ಕುತೂಹಲ ಉಂಟಾಗುವದು. ಇಷ್ಟಕ್ಕೆ ತೃಪ್ತಿಯುಗಿ ಯುವದಿಲ್ಲ. ಓದಿ ಮುಗಿದನಂತರ ಮುದ್ದಿ ನದು ಯಾವಾಗ ಕೈಗೆ ಸಿಕ್ಕು ಬಾಯ್ಗೆ ಓದಲು ಸಿಕ್ಕೀದೆಂದು ಬಾಯ್ಬಿಡುವಂತಾಗಿದೆ ಅಂತೇ ರುಚಿಕಟ್ಟಿನ ಐತಿಹಾಸಿಕ ಸಂಗ ಹವಾಗಿದೆ. ಇಷ್ಟು ರುಚಿ ಬರಲಿಕ್ಕೆ ಇಂತಿಲ್ಲಿ ಕಾಲಕ್ಕೆ. ತಿಳಿಯಬೇಕಾದ ಸಂಗತಿಗಳ ಜ್ಞೇ ಕಾರಣವಾಗಿದೆ ಚರಿತ್ರೆ ಸುಭಾಸಬಾಬುಗಳ ತಾ ಯ ಜನ ಣಕ್ಕೆ ಮೀಸಲಾದವ್ದು; ಸರಕಾರ ವೇ ಧಿಕಾರತನ ಒದ್ದೊಗೆದದ್ದೂ; ರಾಷ್ಟ್ರಸೇವಾ ಕಾರ್ಯಕ್ಕೆ ಅಣಿಯಾಗಿ ಕಾಲೇಜಕ್ಕೆ ಮುಖ್ಯೋದ್ಯಾಪಕರಾದದ್ದೂ ಪತ್ರಿಕೆ ಸಂಪಾ ದಕರಾದದ್ದೂ, ಕರಾಳ ಶಾಸನಕ್ಕೆ ತತ್ತಾಗಿ ಕಾರಾಗೃಹ ಸೇರಿದ್ದೂ, ಆ ನರಕಯಾತ ನೆಗೆ ಸಿಕ್ಕು ದೇಹ ಕೃಶವಾಗಿ ಕಕ್ಕಾವಿಕ್ಕಿ ಯಾದದ್ದೂ, ಕಠೋರ ಶಿಕ್ಷೆಗಳನ್ನು ಶಾಂತ ರೀತಿಯಿಂದ ಸಹಿಸಿದ್ದೂ ಎಡರುಗಳಿಗೆ ಅಣಿ ಯದೆ ಮಣಿಯದೆ ಬಾಳಿದ್ದೂ ಸ್ವಾತಂ ತ್ರ್ಯ ಸಾಧನೆಯ ತಪಸ್ಸನ್ನಾಚರಿಸಲು ಬದುಕಿದ್ದೂ, ಕಣ್ಣುಗಳಿಂದ ಓದುವದು ಕಲ್ಲೆದೆಯವನಿಂದಲೇ ಸಾಧ್ಯವಿದೆ. ಎಷ್ಟೆ ಹೃದ್ಯವಸ್ತುಗಳುಳ್ಳತ್ತಿದೆ ಈ ಹೊತ್ತಿಗೆ ಓದಿದ ಮೇಲೆ ಖಿನ್ನದವನ ಕತ್ತಿ ಹಿಡಿಯಲೇಬೇಕು. ಈ ಚರಿತ್ರ ಕೇಳಿದವ ಕಾಳಗಕ್ಕೆ ಹೊರ ಡಲೇಬೇಕು. ಅಷ್ಟು ಕನಿಕರವಾಗಿದೆ. ಹುತ್ತು ಹುರುಪಿನದೂ ಇದೆ.

ಇನ್ನು ಚರಿತ್ರನಾಯಕ ಬೋಸರವರ ವಿಚಾರಗಳ ನಿಘಂಟೂ ಇದರಲ್ಲಿ ಅಡಕವಾ ಗಿದೆ. ಬಾ ಬು ಗ ಳು ಅಂತರಾಷ್ಟ್ರೀಯತೆ ಯಲ್ಲಿ ಬಲವಾದ ನಂಬುಗೆ ಉಳ್ಳವರು ಅದಕ್ಕೆ ವಿರೋಧವಾಗದ ಉಜ್ವಲ ರಾಷ್ಟ್ರೀ

ನಾಡು ಈ ಬಡಗಿನ ಸಾಹಿತ್ಯ ಸಂಗ್ರಹಗಳ ಕೊರತೆಯಲ್ಲಿದೆ ರಾಷ್ಟ್ರೀಯ ಪ್ರಚಾರ ಕಾರ್ಯವನ್ನು ದೈನಿಕ ಪತ್ರಗಳ ಹೊರತು ಮಾಡಿದರೆ ಇಂತಹ ಹೊತ್ತಿಗೆಗಳು ಕೆಲವೊಂದು ಸಿಗಬಹುದಾಗಿದೆ ಇಷ್ಟರಿಂದಲೇ ತೃಪ್ತಿಯೇ !, ಇದು ಭರತಿಯೇ ! ಅಂದವೇಲೆ ಇಂದಿನ ಘೋರ ಸಂಗ್ರಾಮದಲ್ಲಿ ಸೇನಾನಿಯೂ ಅವನೇ ಗೀಚುವವನು ಅವನೇ ಹೀಗಾಗಿ ಒಂದು ಕೈಯಲ್ಲಿ ಅಲಗೂ ಇನ್ನೊಂದು ಕೈಯಲ್ಲಿ ಗಲಗೂ ಹಿಡಿದು ಹೋರಾಟದಲ್ಲಿ ಹೆಗಲಿಗೆ ಹೆಗಲು ಹಚ್ಚಿ ಇಬ್ಬಗೆಯಿಂದಲೂ ನುಗ್ಗುತ್ತಿರುವ ಶ್ರೀ॥ ಕಲ್ಲನಗೌಡರಿಂದ ಆ ಕೊರತೆಯು ಭರಿತಿಯು ಆರಂಭವಾಗಿದೆಂದೂ ಕನ್ನಡ ನಾಡಿನ ಸಾಹಿತ್ಯವು ಕೆಲವಷ್ಟಿಗೆ ಋಣಿಯೇ ಸರಿ. ಯಾಕಂದರೆ ಐತಿಹಾಸಿಕ ಹೊತ್ತಿಗೆಗಳೇ ಆಗಲಿ, ಆ ಪ್ರಬಂಧ ನಿಬಂಧಗಳಿರಲಿ ಇವೆಲ್ಲವೂ, ಈ ಯುಗದ ಪೈರು ಇದೀಗ ಆರಂಭವಾಗಿದೆ. ಈ ಕೆಲಸಕ್ಕೆ ಕೇವಲ ಒಬ್ಬ ಸಾಲೆ ಬರೆಸುವೆನೊಬ್ಬನು ಕೈ ಹಾಕಿದ ಐತಿಹಾಸಿಕ ಕತೆಯಲ್ಲ ಆದರೆ ಒಬ್ಬ ಸೇನಾನಿಯು ತನ್ನ ನಿಷ್ಠಾನಾಯಕನ ಚರಿತ್ರವನ್ನೆತ್ತಿ ಒಂದು ಕಣ್ಣಿನಿಂದ ಒಕ್ಕ ಸುರಿಸಿ, ಇನ್ನೊಂದು ಕಣ್ಣಿನಿಂದ ನೀರ್ ಸುರಿಸಿ, ಆತ ತೆಪ್ಪಗಾರಡು ಕಸಿ ಕರದಿಂದ ಮುರಿ ಮುರಿ ಮರುಗಿ ಅನಾಹುತ ಅಚ್ಚೊತ್ತಿದಂತೆ ತನ್ನವರ ಮುಂದೆ ಹೃದಯದಿಂದ ಹೊರಬಿದ್ದ ತೋಡಿಕೊಂಡ ಸತ್ಯ ಸಂಗತಿಯ ಕೂಗು. ಅಂತೇ ಲೆಕ್ಕ ಹಾಕಿ ಬರೆದ ಕತೆಯಲ್ಲ. ಇನ್ನು ಪಕ್ಷಪಾತಕ್ಕೆ ಇಂಬಿಲ್ಲ. ಮುಂದಿನ ಇತಿಹಾಸಕಾರನಿಗೆ ಈ ಮಾತಿಗೆ ಸಾಕ್ಷಿ ಅವಶ್ಯಕತೆಯೂ ಇಲ್ಲ ಆತ್ಮಕ್ಕೆ ಅನಿಸಿದ ಅಳುವಿನಿಂದ ಹೊರಹೊಮ್ಮಿದ ಈ ಐತಿಹಾಸಿಕ-ಪುರಾವೆ ಎದುರು ಪಕ್ಷಗಾರನೂ ಸಹ ಪಕ್ಷಪಾತವೆನ್ನಲಾರನು ಈ ಮಾತಿಗೆ ಬ್ರಿಟಿಶನೇ ತನಗೆ ತಾ ಸಾಕ್ಷಿ! ಏನಾದರೂ ಪಕ್ಷಪಾತದಿಂದ ಬರೆದ ಒತ್ತೊಟ್ಟನ ಇತಿಹಾಸವಲ್ಲ. ಹೀಗಾಗಿ ಈ ಇತಿಹಾಸವು ಕನ್ನಡ ನಾಡಿನ ಪ್ರಚಾರ ಸೇವೆ ಸಾಹಿತ್ಯಕ್ಕಾಗಿ ವಿಶೇಷವಾಗಿಯೂ, ಇತಿಹಾಸಕ್ಕೆ ಬಲವಾಗಿಯೂ ಸೇವೆಯಾಗಿರುವದರಲ್ಲಿ ಏನೂ ಸಂದೇಹವಿಲ್ಲ

ರಾಷ್ಟ್ರಪತಿ ಸುಭಾಸಬಾಬುಗಳ ಇತಿಹಾಸ ಬರೆಯುವದು ಕಲ್ಲನಗೌಡರಿಗೆ ಸಲ್ಲಿದಷ್ಟು ತಿಗೆ ಉತ್ತರ. ಇನ್ನು ಇತಿಹಾಸಕಾರನಿಗೆ ಮೇಲೆಯೇ ಉತ್ತರ ಕೊಟ್ಟದ್ದಿದೆ.

ಒಟ್ಟಿಗೆ ಈ ಚಿಕ್ಕ ಹೊತ್ತಿಗೆಯು ಸಾಹಿತ್ಯಕ್ಕೂ, ಸಂಗ್ರಾಮಕ್ಕೂ, ಇತಿಹಾಸಕ್ಕೂ ತನ್ನ ಸೇವೆ ಸಾಕಷ್ಟು ಮಾಡಿದೆ ಸಮರದ ಮಧ್ಯದಲ್ಲಿ ನಡು ಕಟ್ಟಕೊಂಡು ಒಂದೇ ಕೈಯಲ್ಲಿ ಗಲಗೂ, ಅಲಗೂ ಹಿಡಿದುಕೊಂಡು ಸಮರದ ಸೇನಾನಿಗಳಿಗೂ ತುತೂರಿಯಾಗಿದೆ. ಈ ಮಹತ್ವ ಹೊರಗಿನ ರಸಿಕರಿಗೆ ಅಷ್ಟೊಂದು ತಿಳಿಯದು. ಅಂತೇ ಶ್ರೀ॥ ಕಲ್ಲನಗೌಡರ ಈ ಪ್ರಬಂಧವು ಸಾಹಿತ್ಯಕ್ಕೆ ಇತಿಹಾಸಕ್ಕೆ ಹೆಚ್ಚಾಗಿ ಪ್ರಚಾರ ಕಾರ್ಯಗಳಲ್ಲಿ ಒಂದು ಸ್ಥಾನ ಕಾಯ್ದಿಟ್ಟದೆ ಇತಿಹಾಸ ಸಾಕ್ಷಿ ದೃಷ್ಟಿಯಿಂದಲೂ, ಸಾಹಿತ್ಯ ದೃಷ್ಟಿಯಿಂದಲೂ ಈ ರೀತಿಯ ಚರಿತ್ರಗಳಿಗಾಗಿ ಹೇಳಿದ್ದಾಯಿತು. ಇನ್ನು ಕಥಾವಸ್ತು ಸ್ಥಿತಿ ಬಗ್ಗೆ ಮಾತನ್ನಾಡುವದಾದರೆ ಮುನ್ನುಡಿಕಾರರಾದ ಶ್ರೀಮತಿ ಕಮಲಾದೇವಿಯವರು ಚರಿತ್ರ ನಾಯಕನ ವಿಶಾಲ ದೃಷ್ಟಿ; ವಿಸ್ತವಿಚಾರ, ರಾಷ್ಟ್ರಯೋಜನೆ, ಕರ್ಮ ಕುಶಲತೆ, ಧುರೀಣತೆ, ವಿಚಾರ ಸ್ವತಂತ್ರತೆ, ಉತ್ಕ್ರಿಯತೆ, ನಾಯಕತನ ಗುಣಗಳನ್ನೆಲ್ಲ ಹೃದಯ ಹೊಯ್ದಾಡುವಂತೆ ಹೇಳಿದ್ದಾರೆ. ಇ ಹೇಳುವ ಅಧಿಕಾರವೂ ಇವರಿಗೊಬ್ಬರಿಗೇ ಇದೆ ಅಂತೇ ಮುನ್ನುಡಿಯು ಚರಿತ್ರಕ್ಕೂ ಚರಿತ್ರಕಾರನಿಗೂ ಸುವರ್ಣ ಮುಲಾಮು ಸುಗಂಧಕ್ಕೆ ಲೇಪಿಸಿದೆ

ಶ್ರೀ॥ ಕಲ್ಲನಗೌಡರು ರಾಷ್ಟ್ರಪತಿಗಳ ಚರಿತ್ರಹೇಳುವಾಗ ಬಾಲ್ಯದಿಂದ ವಿದ್ಯಾರ್ಥಿ ಜೀವನದಿಂದ ಇಂದಿನ ತನಕ ಏನೂ ಬಿಡದೆ ಸರಿಯಾಗಿ ಪೋಣಿಸುತ್ತ ಒಂದು ಬದ್ಧವಾದ, ಸರಸವಾಗಿ ಸುಂದರವಾಗಿ ಮಾಲೆ ಹೆಣೆದಿದ್ದಾರೆ. ಈ ಮಾಲೆಯು ಇನ್ನೂ ಪೂರ್ಣವಾಗಿಲ್ಲವೆಂಬುದು ಸಹಜವೇ-ಈ ಮಾಲಿಕೆಯಲ್ಲಿಯ ಮುತ್ತುಗಳಿಗೆ ಸರಿಯಾದ ಪೆರಗು ಕೊಟ್ಟಿದ್ದಾರೆ. ಅಂತೂ ಒಂದು ಹೊಂದಿಕೆ ಯಾದ ಹೊಗಳಿಕೆಯ ಪ್ರಬಂಧವಾಗಿದೆ ಅಲ್ಲಲ್ಲಿ ಸಂಗತಿಗಳನ್ನ ವಿಶೇಷವಾಗಿ ಹೇಳಿರುವದರಿಂದ ಐತಿಹಾಸಿಕ ದಿನಚರಿಯಂತೆ ಭಾಸವಾಗುತ್ತದೆ ಆದರೂ ರುಚಿಗೆ ಎಲ್ಲಿಯೂ ಕುಂದುಬಂದಿಲ್ಲ

ಪ್ರೌಢಿಯನ್ನು ಪಡೆದಿದ್ದು ಹೊಟ್ಟೆಕಿಚ್ಚಾದರೂ ಮೆಯಾದರೂ ವಿಶ್ವವ್ಯಾಪಕವಾಗಲಾರದೆಂಬ ಸಂಶಯ ವೃತ್ತಿಯವರು, ಜನಜಂಗುಳಿಯ ತತ್ವಕ್ಕೆ ಒಪ್ಪಿದವರು. ಹಳ್ಳಿಗಳಲ್ಲಿ ಹೃದಯವಿದ್ದವರು ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವನೇ ಗುರಿಯಾಗಿಟ್ಟುಕೊಂಡವರು. ಆರ್ಥಿಕ ಪುನರ್ಘಟನೆಯಲ್ಲಿ ಇಚ್ಛೆಯುಳ್ಳವರು ಸಾಮಾಜಿಕ ಪ್ರಭುತ್ವ ಇರಬೇಕೆನ್ನುವವರು. ಯುವಕ ಆಂದೋಲನದಲ್ಲಿ ಒಳ್ಳೇ ಆಸ್ತೆಯವರು ಸ್ತ್ರೀ ಸ್ವಾತಂತ್ರ್ಯದಲ್ಲಿ ಶ್ರದ್ಧೆಯವರು ಇವ ಷ್ಟೆಲ್ಲ ಸಾಧಿಸುವದಲ್ಲಿ ಇವರೇ ದಿಟ ಮಾರ್ಗವಾಗಿಟ್ಟುಕೊಂಡು ಸಾಧನೆ ತಕ್ಕ ಹಂಚಿಕೆಗಾರರಾಗಿದ್ದಾರೆ. ಈ ವಿಚಾರಗಳೆಲ್ಲವುಗಳೂ ಈ ಪ್ರಬಂಧದಲ್ಲಿ ವಿವೇಚನೆಯು ತಕ್ಕಮಟ್ಟಿಗೆ ಆಗಿದೆ

ಒಟ್ಟಿಗೆ ಚರಿತ್ರನಾಯಕನ ಸೆರೆಮನೆ ವಾಸ ಆರೋಗ್ಯಕ್ಕಾಗಿ ಪ್ರವಾಸ ನಾಡಿನ ಹೊರಗೂ ಒಳಗೂ ಸಮರ ಪನ್ನಹ, ಹನ್ನಿಂಕೆ ಎಮೆಗಾರಿಕೆ ವಿಚಾರ ನೇದಿಕ ಪಡೆಸ್ಟ್ ತ್ತುವಂತೆ ಬಿಂಬಿಸಿ ಎಲ್ಲ ಹೊಯ್ದು ಒಂದು ಸಾಹಿತ್ಯದೇವಿಯ ಮೂರ್ತಿಯಾಗಿದೆ ಇನ್ನು ಬಣ್ಣಿಸುವ ಶೈಲಿಯು ಗಡಚಾದುದಲ್ಲ. ಹೊಸತಲ್ಲ ಆದರೂ ಸರಳವಾದದು ಸಾಂಪ್ರದಾಯಕವಾದರೂ ಸುಂದರವಾಗಿದೆ ಸಹಳ್ಳಿಯೇ ಇವರೆ ಹ್ಯದಯ ಪಟ್ಟಣಿಗರಿಗೆ ಬರೆದಿಲ್ಲ ಹಳ್ಳಿಯ ಜನತೆಗಾಗಿಯೇ ಈ ಸೇವೆಮಾಡಿದ್ದಾರೆ. ಪಟ್ಟಣಿಗರ ಮೆಚ್ಚುಗೆಗಾಗಿ ಅಲ್ಲ ಹಳ್ಳಿಗರ ಹೃದಯದಲ್ಲಿ ಹೊಕ್ಕು ಹೊರಬೀಳಬೇಕಾಗಿದೆ. ಅಂತೇ ಜನಜಂಗಳಿಯ ನಿಜವಾದ ಸೇವಕರು ಇವರಿಗೆ ಬೇಕಾದದು ಸಾಹಿತ್ಯವಲ್ಲ ಆದರೆ ಸೇವೆ ಇವರಿಗೆ ಹೇಳಿಕೊಳ್ಳುವ ಇತಿಹಾಸಕಾರನಾಗಬೇಕಾಗಿದೆ. ಈಗಾಗಲೇ ಆ ಹೆಸರು ಹೆಂದಿದ್ದಾರೆ. ಅಂತೇ ಇತಿಹಾಸಕಾರ ಸಾಹಿತಿಯೆಂಬ ದಿಮಾಕಿಗೆ ಒಲಿದವರಲ್ಲ. ಅದಕ್ಕಾಗಿ ಬರೆದವರಲ್ಲ.

ಪರಿಪೂರ ಜಾತಿಗೆ ಕೈದೀವಿಟಿಗೆಯಾಗಿ ಆ ಣಾರಿಗುಂಟೆ ಒಳ್ಳೇ ದೀಪವಾಗಿದೆ ಅಂತೇ ಶ್ರೀ ಕಲ್ಲನಗೌಡರು ಒಬ್ಬ ಸೇನಾನಿಯ ಕರ್ತವ್ಯ ಇಬ್ಬಗೆಯಿಂದ ಸಾಧಿಸಿದ್ದಾರೆ.